(ಶ್ರೀ ಟಿ. ಪಿ. ಗಂಗಾಧರ್)

ಜರುಗಿಸಬಹುದು. ಈ ರೀತಿ ಮಾಡಿದರೆ ಮರ್ಯಾದೆ ಉಳಿಯುವುದಿಲ್ಲ. ಈ ದೃಷ್ಟಿಯಿಂದ ಸರ್ಕಾರದವರು ಹಿಂದೆ ಏನು ಆದೇಶ ಕೊಟ್ಟಿದ್ದರೋ ಅದರಂತೆ ಆ ಕೆಲಸವನ್ನು ಮುಂದುವರೆಸುವುದಕ್ಕೆ ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಯಾರಿಂದ ತಪ್ಪಾಗಿದೆ ಎಂಬುದನ್ನು ಪರಿಶೀಲನೆ ಮಾಡಿ ನೋಡುತ್ತೇನೆ.

ಶ್ರೀ ವಿ. ಎರ್. ಶಿವಪ್ಪ.—ಗ್ರಾಮಸ್ಥರಿಂದ ಏನೂ ತಪ್ಪಾಗಿರದೆ ಕೇವಲ ಅಧಿಕಾರಿಗಳದ್ದೇ ತಪ್ಪು ಇದ್ದರೆ ಸರ್ಕಾರದವರು ಖಂಡಿತವಾಗಿಯೂ ಕೂಡ ಹಿಂದಿನ ನಿಯಮದಂತೆ ಠೇವಣಿ ಪಡೆದು ಕೊಂಡು ಕಟ್ಟಡವನ್ನು ಕಟ್ಟಿಸಿಕೊಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಂ. ಎನ್. ರಾಮಣ್ಣ.—1961ನೇ ಇಸವಿಯಲ್ಲಿ ದುಡ್ಡು ಕೊಡುವಾಗ ಸರಕಾರದವರಿಗೆ ದುಡ್ಡು ಕೊಟ್ಟದ್ದು ಯಾವಾಗ ಮತ್ತು ಶೇಕಡಾ 25 ರಷ್ಟು ಯಾರಿಂದ ಕಟ್ಟಿಸಿಕೊಂಡರು.

2-00 P.M.

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಇವನ್ನೆಲ್ಲಾ ಪರಿಶೀಲನೆ ಮಾಡಿ ಸೂಕ್ತವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಆಗಲೇ ಹೇಳಿದ್ದೇನೆ.

Sri S. SIVAPPA.—When they have deposited the amount according to the then conditions, why have the Government failed to take up the construction of the building in time ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಇವೆಲ್ಲಾ ವಿವರಗಳನ್ನು ಪರಿಶೀಲನೆ ಮಾಡಿ ಇದರಲ್ಲಿ ಸರಕಾರದ್ದು ತಪ್ಪಾಗಿದೆಯೇ ಇಲ್ಲವೇ ಯಾರಿಂದ ತಡವಾಗಿದೆ ಎನ್ನುವುದನ್ನು ನೋಡಿ ಯಾರಿಗೂ ಅನ್ಯಾಯವಾಗದಂತೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಈ ಸಾರ್ವಜನಿಕ ವಿದ್ಯಾರ್ಥಿನಿಲಯದ ಎಸ್ಟಿಮೇಟು ಎಷ್ಟು ಆಗಿತ್ತು ಮತ್ತು ಶೇಕಡಾ 25 ರಷ್ಟು ಡಿಪಾಜಿಟ್ ಎಂದು ಎಷ್ಟು ಕಟ್ಟಿಸಿಕೊಂಡಿದ್ದೀರಿ ಮತ್ತು ಈಗ ಪುನಃ ರಿವೈಸ್ಡ್ ಎ ್ಟಮೇಟು ಎಷ್ಟಾಗಿದೆ ಮತ್ತು ಇದಕ್ಕೆಲ್ಲಾ ಜವಾಬುದಾರರು ಯಾರು ?

ಶ್ರೀ ಎನ್. ಎಂ. ಕೊಟ್ರಬಸಯ್ಯಸೋಗಿ.—ಆ ವಿವರಗಳು ನನ್ನಲ್ಲಲ್ಲ. ಇದಕ್ಕೆ ನೋಟೀಸು ಬೇಕು.

Repairs to Talikote-Hoovinahippargi Road

556. Sri S. M. GURADDI (Muddebihal).—

Will the Minister for Public works be pleased the state :—

(*a*) Since when Talikote-Hoovina Hipparagi road has not been repaired;

(*b*) whether it is a fact that provision in respect of repairing this road has been made in the Budget for 1968-69;

(*c*) if so, the reason for not taking up the repair work of this road so far ?

Sri BASAVARAJ MAGAVI (Deputy Minister for Public Works).—

(*a*) It is being repaired every year.

(*b*) Yes.

(*c*) Approval for an estimate of Rs. 4,50,000 was given some days back.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಪ್ರತಿ ವರ್ಷ ದುರಸ್ತು ಮಾಡಲಾಗುತ್ತಿದೆ ಎಂದರೆ ಕಳೆದ ಎರಡು ಸಾಲುಗಳಿಂದ ಇದಕ್ಕೆ ಆಗಿರುವ ಖರ್ಚೆಷ್ಟು ?

†ಶ್ರೀ ಬಸವರಾಜ ಮಾಗಾವಿ.—ಸುಮಾರು 33 ಸಾವಿರ ರೂಪಾಯಿಗಳಷ್ಟು ಖರ್ಚು ಮಾಡಲಾಗಿದೆ ಸುಮಾರು ಹತ್ತು ವರ್ಷಗಳ ಸರಾಸರಿ ಬೇಕಾದರೆ ಕೊಡಬಹುದು. ಎರಡು ಸಾಲುಗಳ ಖರ್ಚು ಎಂದರೆ 1966-67 ನೇ ಸಾಲಿನಲ್ಲಿ ಇದಕ್ಕೆ ಸ್ಪೆಷಲ್ ಅರಾಟ್‌ಮೆಂಟಾಗಿ ಸುಮಾರು 58,640 ರೂಪಾಯಿಗಳು ಮತ್ತು ಕರೆಂಟ್ ಸಾಲಿನಲ್ಲಿ 6,780 ರೂಪಾಯಿಗಳು ಅನಂತರ ಪುನಃ 64,592 ರೂಪಾಯಿಗಳು ಮತ್ತು ಈಗ 7,500 ರೂಪಾಯಿಗಳು 1968-69 ನೇ ಸಾಲಿನಲ್ಲಾಗಿ 6,000 ರೂಪಾಯಿಗಳ ಹಣ ಕೊಡಲಾಗಿದೆ.

ಶ್ರೀ ವಿ. ಎನ್. ಪಾಟೀಲ್.—ಮಾನ್ಯ ಮಂತ್ರಿಗಳು ಹಿಂದೆ ಒಂದು ಸಾರಿ ಇಲ್ಲಿ ಉತ್ತರ ಕೊಡುವಾಗ ಬಿಜಾಪುರದ ರಸ್ತೆಗಳೆಲ್ಲಾ ಚೆನ್ನಾಗಿವೆ ಯಾವುದೂ ಕೆಟ್ಟಿಲ್ಲ ಎಂದು ಹೇಳುತ್ತಿದ್ದರು. ಈಗ ಅವರು ನೋಡಿಕೊಂಡು ಬಂದಿರುವುದರಿಂದ ಎಲ್ಲಾ ರಸ್ತೆಗಳೂ ಸರಿಯಾದ ಸ್ಥಿತಿಯಲ್ಲಿವೆ ಎಂದು ಹೇಳುತ್ತಾರೆಯೇ ?

ಶ್ರೀ ಬಸವರಾಜ ಮಾಗಾವಿ.—ರಸ್ತೆ ಸರಿಯಾಗಿಲ್ಲ ಎಂದು ಹೇಳಲಿಲ್ಲ. ರಸ್ತೆ ಚೆನ್ನಾಗಿಲ್ಲ ಎಂದು ಅಲ್ಲಿಗೇ ಹೋಗಿ ನೋಡಿಕೊಂಡು ಮಾನ್ಯ ಸದಸ್ಯರಾದ ಶ್ರೀ ಗುರ್ರೆಡ್ಡಿಯವರ ಮನೆಯಲ್ಲಿ ಊಟ ಕೂಡ ಮಾಡಿಕೊಂಡು ಬಂದಿದ್ದೇನೆ. ಇಲ್ಲಿರುವ ರಸ್ತೆಗಳು ದುರಸ್ತು ಮಾಡಬೇಕು ಎನ್ನುವುದು ಸರಕಾರ ಒಪ್ಪಿ ಅದನ್ನು ಮಾಡಬೇಕು ಎನ್ನುವುದು ಸರಕಾರದ ಗಮನದಲ್ಲಿದೆ. ಇದಕ್ಕಾಗಿ ಈಗಾಗಲೇ ಸುಮಾರು ನಾಲ್ಕು ಲಕ್ಷದ ಐನೂರೆಂಬತ್ತು ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಮತ್ತೆ ಆರು ಲಕ್ಷ ಇದಕ್ಕೆ ಖರ್ಚು ಮಾಡಿ ಉತ್ತಮಪಡಿಸಬೇಕೆಂದು ಜಾಗ್ರತೆಯಿಂದ ಕೆಲಸ ಮಾಡುತ್ತಿದ್ದಾರೆ.

ಶ್ರೀ ಸದಾಶಿವಪ್ಪ ಪಾಟೀಲ್.—ಮಾನ್ಯ ಮಂತ್ರಿಗಳು ಶ್ರೀ ಗುರ್ರೆಡ್ಡಿಯವರ ಮನೆಗೆ ಹೋಗಿ ಬಂದೆ ಎಂದರು. ಅವರು ಕಾರಿನಲ್ಲಿ ಹೋಗಿ ಬರಬೇಕಾದರೆ ಕನಿಷ್ಟಪಕ್ಷ ನಮ್ಮ ಬಿಜಾಪುರದ ರಸ್ತೆಗಳಲ್ಲಿ 25 ಕಿಲೋ ಮೀಟರು ಮೇಲೆ ಸ್ಪೀಡ್ ಕಾರ್ ಹೋಗುವುದಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಇಲ್ಲಿ ಸ್ಪೇಟು ಕಾರಿನಲ್ಲಿ ಹೋದರೋ ಇಲ್ಲವೇ ಬೇರೆ ಯಾವುದಾದರೂ ಬಂಡಿಯಲ್ಲಿ ಹೋಗಿಬಂದಿದ್ದರೋ ! ನಾನೂ ಕೂಡ ಅಲ್ಲಿಗೆ ಹೋಗಿ ಬಂದಿದ್ದೇನೆ, ಇವರ ಬಗ್ಗೆ ತಿಳಿಸುತ್ತಾರೆಯೇ ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರು ಹೇಳಿದಂತೆ 20 ಕಿಲೋ ಮೀಟರು ಸ್ಪೀಡ್‌ನಲ್ಲೇ ಸ್ಪೇಟು ಕಾರಿನಲ್ಲಿ ಹೋಗಿ ಆ ರಸ್ತೆ ನೋಡಿಕೊಂಡು ಬಂದಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಈ ರಸ್ತೆ ಮೇಲೆ ಎಷ್ಟು ಖರ್ಚು ಬಿದ್ದಿದೆ ಎನ್ನುವುದರ ಅಂಕಿ ಸಂಖ್ಯೆಗಳನ್ನು ಕೊಟ್ಟಿದ್ದಾರೆ. ಮತ್ತು ಇಲ್ಲಿ ಮಾನ್ಯ ಸದಸ್ಯರುಗಳು ಕೊಟ್ಟ ಅಭಿಪ್ರಾಯದಂತೆ ರಸ್ತೆ ದುರಸ್ತು ಇದುವರೆಗೆ ಆಗಿಲ್ಲ, ಬರೇ ಖರ್ಚು ಮಾತ್ರ ಬರುತ್ತಿದೆ. ಇದರ ಬಗ್ಗೆ ಒಂದು ತನಿಖೆ ಮಾಡಿ ಇದರಲ್ಲಿ ಯಾರದು ತಪ್ಪಾಗಿದೆ ಎನ್ನುವುದನ್ನು ತಿಳಿದು ಅಂತಹವರ ಮೇಲೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಮಾನ್ಯ ಸದಸ್ಯರಿಗೆ ಹೇಳಿದೆ ಈಗಾಗಲೇ ಸುಮಾರು ಐದು ಲಕ್ಷದಷ್ಟು ಇಲ್ಲಿ ವೆಚ್ಚ ಮಾಡಬೇಕಾಗಿದೆ.

ಶ್ರೀ ಎಂ. ನಾಗಪ್ಪ.—ಸ್ವಾಮಿ, ಈವೊತ್ತು, ಸರ್ಕಾರದಲ್ಲಿ ಹೇಳತಕ್ಕಂಥ ರೋಡು ಒಂದು, ಹಣ ಖರ್ಚು ಮಾಡತಕ್ಕಂಥಾದ್ದು ಬೇರೆ ರೋಡಿಗೆ ಎಂದು ನಾವು ಕೇಳಿದ್ದೇವೆ. ಇದೇ ಪರಿಸ್ಥಿತಿ ಈ ರೋಡಿಗೆ ಆಗಿದ್ದರೆ ಮತ್ತೆ ಇದನ್ನು ಪುನರ್ಪರಿಶೀಲನೆ ಮಾಡುತ್ತೀರಾ ?

ಶ್ರೀ ಬಸವರಾಜ ಮಾಗಾವಿ.—ಹಾಗೆ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವ ರೋಡ್ ಮೇರೆ ಖರ್ಚು ಮಾಡಬೇಕು ಎಂದು ಹಣ ಇಟ್ಟುಕೊಂಡಿದ್ದೇವೋ ಅದೇ ರೋಡ್ ಮೇರೆ ಖರ್ಚು ಮಾಡ ಮಾಡಬೇಕು. ಇಲ್ಲದಿದ್ದರೆ ಆಡಿಟ್ ಅಬ್ಜೆಕ್ಷನ್ ಬರುತ್ತದೆ.

ಶ್ರೀ ಎಸ್. ಎಂ. ಗುರೆಡ್ಡಿ.—ಸ್ವಾಮಿ, ನಾನು ಈ ಪ್ರಶ್ನೆಯನ್ನು ಜವಾಬ್ದಾರಿಯಿಂದ ಮಾನ್ಯ ಮಂತ್ರಿಗಳನ್ನು ಕೇಳುತ್ತಿದ್ದೇನೆ. ನಮ್ಮ ತಾಲ್ಲೂಕಿಗೆ ಅವರು ಯಾವಾಗ ಬಂದಿದ್ದರು ? ಯಾವ ತಾರೀಕಿನಲ್ಲಿ ಪ್ರೋಗ್ರಾಂ ಹಾಕಿದ್ದರು ? ಎಷ್ಟು ವರ್ಕ್ ಆಗಿತ್ತು ! ನಮ್ಮದು ಬಹಳ ಮುಖ್ಯವಾದ ಜಾಗ. ಇದು ಬೆಂಗಳೂರಿಗೂ ವಿಜಾಪುರಕ್ಕೂ ಇರುವ ಪೋರ್ಷನ್ ರೋಡು. ಆದುದರಿಂದ ನಾನು ಕೇಳುತ್ತಾ ಇರುವುದು ಇದಕ್ಕೆ ಒಂದು ಸ್ಪೆಷರ್ ಸೆರ್ ಕಳುಹಿಸಿ ಈ ರೋಡಿಗೆ ಎಷ್ಟು ಖರ್ಚಾಗಿದೆ ಎನ್ನುವುದನ್ನು ತೋರಿಸುತ್ತೀರಾ ! ಇದು ಖರ್ಚಾಗಿರುವುದು ಬೇರೆ ರೋಡಿಗೆ. ನಮ್ಮ ರೋಡಿಗೆ ಖರ್ಚಾಗಿದೆ ಎನ್ನುವುದನ್ನು ತೋರಿಸುವುದಾದರೆ ನಾನು ಎಂ.ಎಲ್.ಗೆ ರಾಜೀನಾಮೆ ಕೊಡುವುದಕ್ಕೆ ತಯಾರಾಗಿದ್ದೇನೆ.

ಶ್ರೀ ಬಸವರಾಜ ಮಾಗಾವಿ.—ಹಾಗೇನೂ ಇಲ್ಲ, ಈ ರೋಡಿಗೇ ಖರ್ಚು ಮಾಡಿದ್ದೇವೆ. ಈ ರೋಡಿಗೆ ನಾಲ್ಕೂವರೆ ಲಕ್ಷ ರೂಪಾಯಿ ಖರ್ಚು ಮಾಡಬೇಕು ಎಂದು ಎಸ್ಟಿಮೇಟ್ ತಯಾರಾಗಿತ್ತು. ಇಷ್ಟಕ್ಕೆ ಆಗುವುದಿಲ್ಲ ಇನ್ನೂ ಬೇಕು ಎಂದು ಐದೂವರೆ ಲಕ್ಷ ರೂಪಾಯಿಗೆ ಎಸ್ಟಿಮೇಟ್ ತಯಾರಿಸಿದ್ದೇವೆ. ಇನ್ನೂ ಗವರ್ನಮೆಂಟನವರು ಸ್ಯಾಂಕ್ಷನ್ ಕೊಟ್ಟಿಲ್ಲ, ಅದು ಆಗುತ್ತದೆ ಎನ್ನುವುದನ್ನು ತಿಳಿದುಕೊಂಡಿದ್ದೇವೆ. ಆ ಕೆಲಸವನ್ನು ಅವೇರೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಈ ಸಭೆಯಲ್ಲಿ ಗುರೆಡ್ಡಿಯವರು ಮನೆಗೆ ಊಟಕ್ಕೆ ಬಂದಿಲ್ಲ ಎಂದು ಹೇಳುತ್ತಾರೆ, ಉಪಮಂತ್ರಿಗಳು ಬಂದಿದ್ದಾರೆ ಎಂದು ಹೇಳುತ್ತಾರೆ. ಇದರಲ್ಲಿ ಯಾವುದು ಸತ್ಯ ಯಾವುದು ಸತ್ಯವಲ್ಲ ತಿಳಿಸುತ್ತೀರಾ ಸ್ವಾಮಿ.

[*No answer*]

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರಾದ ಶ್ರೀಮಾನ್ ಗುರೆಡ್ಡಿಯವರು ಇತರ ಸದಸ್ಯರು ಕೇಳುತ್ತಿದ್ದಾರೆ. ಇವರು ಖರ್ಚುಮಾಡಿರುವ ಹಣದ ರಸ್ತೆಯೇ ಬೇರೆ ಎನ್ನುವುದು ಈ ಸಭೆಯಲ್ಲಿ ಅನುಮಾನ ಬಂದಿದೆ. ಮಾನ್ಯ ಉಪಮಂತ್ರಿಗಳು ಈ ರಸ್ತೆಗೆ ಲಕ್ಷಗಟ್ಟಲೆ ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ. ಅದು ಯಾವ ರಸ್ತೆಗೆ ಖರ್ಚು ಮಾಡಿದ್ದಾರೆ? ನಿಜವಾಗಿಯೂ ಹಣ ಯಾವ ರಸ್ತೆಗೆ ಖರ್ಚಾಗಿದೆ ಎನ್ನುವುದು ಗೊತ್ತಾಗಿಲ್ಲ. ಆದುದರಿಂದ ಖರ್ಚು ಮಾಡಿರತಕ್ಕಂಥ ಹಣ ಯಾವ ರಸ್ತೆಗೆ ಸಂಬಂಧಪಟ್ಟದ್ದು ಎನ್ನುವುದನ್ನು ತಿಳಿಸುತ್ತೀರಾ? ಎಷ್ಟು ಮೈಲಿಗೆ ಖರ್ಚಾಗಿದೆ ಎನ್ನುವುದನ್ನೂ ತಿಳಿಸಬೇಕು.

ಶ್ರೀ ಬಸವರಾಜ ಮಾಗಾವಿ.—ಈ ರಸ್ತೆಗೆ ಎಷ್ಟು ಹಣ ಖರ್ಚು ಮಾಡಿದ್ದೇವೆ ಎನ್ನುವುದು ಹೇಳುವುದಕ್ಕಾಗುವುದಿಲ್ಲ, ಪ್ರತಿ ವರ್ಷವೂ ಮೈನರ್ ರಿಪೇರಿ ಮತ್ತು ಮೇಜರ್ ರಿಪೇರಿಗೆ ಖರ್ಚಾಗುತ್ತದೆ. ಮಾನ್ಯ ಸದಸ್ಯರು ಅಪೇಕ್ಷೆಪಟ್ಟರೆ ಅದನ್ನು ಟೇಬರ್ ಮೇರೆ ಇಡುತ್ತೇನೆ,

ಶ್ರೀ ಬಾಪೂಗೌಡ —ಮಾನ್ಯ ಉಪಮಂತ್ರಿಗಳು ಈ ರಸ್ತೆ ಕೆಲಸಕ್ಕೆ ಐದೂವರೆ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ, ಇನ್ನೂ ಸ್ಯಾಂಕ್ಷನ್ ಕೊಟ್ಟಿಲ್ಲ ಎಂದು ಹೇಳಿದರು. ಉತ್ತರದಲ್ಲಿ ನಾಲ್ಕೂವರೆ ಲಕ್ಷ ರೂಪಾಯಿ ಎಂದು ಇದೆ. ಹಾಗಾದರೆ ಒಟ್ಟು ಎಷ್ಟು ಖರ್ಚು ಮಾಡಿದ್ದೀರಿ ! ಇದರಲ್ಲಿ ಯಾವುದು ಸತ್ಯ ಯಾವುದು ಅಸತ್ಯ ತಿಳಿಸುತ್ತೀರಾ !

ಶ್ರೀ ಬಸವರಾಜ ಮಾಗಾವಿ.—ಈಗ ನಾಲ್ಕೂವರೆ ಲಕ್ಷ ರೂಪಾಯಿ ಖರ್ಚಾಗಿದೆ. ಮುಂದೆ ಖರ್ಚು ಮಾಡಬೇಕೆಂದಿರುವುದು ಐದೂವರೆ ಲಕ್ಷ ರೂಪಾಯಿ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಉಪಮಂತ್ರಿಗಳು ಶ್ರೀಮಾನ್ ಗುರೆಡ್ಡಿಯವರ ಮನೆಗೆ ಊಟಕ್ಕೆ ಹೋಗಿದ್ದೇವೆ ಎಂದು ಹೇಳಿದರು, ಅವರು ಹೋಗಿಲ್ಲ ಎಂದು ಹೇಳಿದರು ಇದರಲ್ಲಿ ಯಾವುದು ಸತ್ಯ ಯಾವುದು ಯಾವುದು ಅಸತ್ಯ ತಿಳಿಸುತ್ತೀರಾ !

(ಉತ್ತರವಿಲ್ಲ)